**SC No. 278/2021**
**PW-12**

**ದಿನಾಂಕ 17–09–2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ**

ಚಾಸಾ–3 ನಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ಪ್ರಜ್ಞೆ ಇರಲಿಲ್ಲ. ಸದರಿ ಗಾಯಾಳುವಿನ ಹಲ್ಲೆ ಇತಿಹಾಸವನ್ನು ಯಾರು ತಿಳಿಸಿದರು ಎಂದು ನಮೂದು ಮಾಡಿಲ್ಲ ಎಂದರೆ ಸರಿ . ಸಾಮಾನ್ಯವಾಗಿ ಗಾಯಾಳುವಿಗೆ ಚಿಕಿತ್ಸೆ ನೀಡಿದ ವೈದ್ಯರು ಕೇಸ್ ಶೀಟ್ ನಲ್ಲಿ ಚಿಕಿತ್ಸೆಯ ವಿವರಗಳನ್ನು ನಮೂದು ಮಾಡಿ ಸಹಿ ಮಾಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವೈದ್ಯರ ಕರ್ತವ್ಯದ ಅವಧಿ ಮುಗಿದ ನಂತರ ಬಂದ ಮತ್ತೊಬ್ಬ ವೈದ್ಯರು ಕೇಸ್ ಶೀಟ್ ಗೆ ಸಹಿ ಮಾಡುತ್ತಾರೆ ಎಂದರೆ ಸರಿ. ಬೃಂದಾವನ ಆಸ್ಪತ್ರೆಯಿಂದ ನೀಡಿರುವ ದಾಖಲೆಗಳಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ. ಎಲ್ಲ ದಾಖಲೆಗಳಲ್ಲಿ ಡಾ. ಆದಿತ್ಯರವರು ಮಾತ್ರ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ–3–ನಟರಾಜು ರವರಿಗೆ ನಾನು ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಇಲ್ಲದೇ ಇರುವಾಗ ನನ್ನ ಪರವಾಗಿ ಡಾ. ಆದಿತ್ಯ ಡಿಸ್ಚಾರ್ಜ ಸಮರಿಗೆ ಸಹಿ ಮಾಡಿದ್ದಾರೆ ಎಂದರೆ ಸರಿ . ಸಾಮಾನ್ಯವಾಗಿ ಕಬ್ಬಿಣದ ರಾಡು ಮೇಲಿಂದ ತಲೆಯ ಮೇಲೆ ಬಿದ್ದರೆ ನಿಪಿ–13 ರಲ್ಲಿ ನಮೂದು ಮಾಡಿರುವ ಗಾಯಗಳು ಆಗಬಹುದು ಎಂದರೆ ಸರಿ. ನಾನು ಗಾಯಾಳುವನ್ನು ಪರೀಕ್ಷೆ ಮಾಡದಿದ್ದರೂ ಕೂಡ ಪೊಲೀಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.